O.S.194/2011
DW-3

**ಸಾಕ್ಷಿಯನ್ನು ದಿನಾಂಕ 25-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ- 1 ಮತ್ತು 10 ನೇ ಪ್ರತಿವಾದಿ ಪರ ಶ್ರೀ AMK ವಕೀಲರಿಂದಃ**

**1.** ನಾನು **2** ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕ ನನ್ನಿಂದ ಹೇಳಲಾಗುವುದಿಲ್ಲ. ದಾವಾ ಸ. ನಂಬರ್ **39** ರ ಬಗ್ಗೆ ನನಗೆ ಗೊತ್ತು. ಸದರಿ ಸ.ನಂಬರ್ ಒಟ್ಟು **3** ಎಕರೆ ವಿಸ್ತೀರ್ಣ ಇರುತ್ತದೆ. ದಾವೆಯ ಬಗ್ಗೆ ನನಗೆ ಸ್ವಲ್ಪ ಗೊತ್ತು. ಈ ದಾವೆಯನ್ನು ವಾದಿಗಳು ಪ್ರತಿವಾದಿ **1** ರಿಂದ **5** ರವರ ವಿರುದ್ಧ ಸಲ್ಲಿಸಿರುತ್ತಾರೆ. ದಾವಾ ಸ.ನಂ **39** ರ **3** ಎಕರೆ ಚಕ್ಕುಬಂದಿ ಪೂರ್ವಕ್ಕೆ ಪಟೇಲ ವೆಂಕಟಗಿರಿಯಪ್ಪರವರ ಜಮೀನು, ಪಶ್ಚಿಮಕ್ಕೆ ಗುರುಮಲ್ಲಯ್ಯನ ಜಮೀನು, ಉತ್ತರಕ್ಕೆ ತಾಯಿಮುದ್ದಮ್ಮನ ಜಮೀನು, ದಕ್ಷಿಣಕ್ಕೆ ಗುರುಮಲ್ಲಯ್ಯ ಮತ್ತು ಗುಟ್ಟೆ ಬರುತ್ತದೆ. ದಾವಾ ಸರ್ವೆ ನಂಬರ್ ನ್ನು ನಾನು **1948** ನೇ ಸಾಲಿನಿಂದ ನೋಡುತ್ತಿರುತ್ತೇನೆ. ಸ.ನ **39** ನಾಲ್ಕು ಪೋಡುಗಳಾಗಿರುತ್ತವೆ. ಆ ರೀತಿ ಪೋಡುಗಳು ಯಾವ ವರ್ಷ ಆಗಿರುತ್ತದೆ ಎಂದು ನನ್ನಿಂದ ಹೇಳಲಾಗುವುದಿಲ್ಲ. ಯಾವ ಪೋಡು ಯಾರ ಹೆಸರಿನಲ್ಲಿರುತ್ತದೆ ಹಾಗೂ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನ್ನಿಂದ ಹೇಳಲಾಗುವುದಿಲ್ಲ.

**2.** ದಾವಾ ಸ.ನ **39** ಮೊದಲಿಗೆ ವೀರನಾಗಪ್ಪರವರಿಗೆ ಸೇರಿದ್ದಾಗಿದೆ. ನನ್ನ ತಂದೆ ಸದರಿ ಆಸ್ತಿಯನ್ನು **1938** ನೇ ಸಾಲಿನಲ್ಲಿ ವೀರನಾಗಪ್ಪರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. **1938** ನೇ ಸಾಲಿನಲ್ಲಿ ನಾನು ಚಿಕ್ಕಮಗುವಾಗಿದ್ದೆ. ನನ್ನ ತಂದೆ ಹೆಸರಿಗೆ ಆದ ಕ್ರಯಪತ್ರವನ್ನು ನಾನು **10** ವರ್ಷ ವಯಸ್ಸು ಇದ್ದಾಗ ನೋಡಿರುತ್ತೇನೆ. ನನ್ನ ತಂದೆ **3** ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಜಮೀನಿನ ಚಕ್ಕುಬಂದಿ ನಾನು ಮೇಲೆ ಹೇಳಿದ ಚಕ್ಕುಬಂದಿ ಆಗಿರುತ್ತದೆ. ವೀರನಾಗಪ್ಪರವರು ಸ.ನಂ **39** ರಲ್ಲಿ ಎಷ್ಟು ಜಮೀನು ಉಳಿಸಿಕೊಂಡಿದ್ದರೆಂದು ನನಗೆ ಗೊತ್ತಿಲ್ಲ. ವೀರನಾಗಪ್ಪರವರು ಸ.ನ. **39** ರಲ್ಲಿ ಉತ್ತರದ ಭಾಗದ ಜಮೀನನ್ನು ಉಳಿಸಿಕೊಂಡಿದ್ದರು. **1963** ನೇ ಸಾಲಿನಲ್ಲಿ ನನಗೆ **20** ವರ್ಷ ವಯಸ್ಸಾಗಿತ್ತು. ನನ್ನ ತಂದೆ ಚಿಕ್ಕರಂಗಪ್ಪ ಮತ್ತು ನನ್ನ ಚಿಕ್ಕಪ್ಪ ದೊಡ್ಡಯ್ಯ.

ಸದರಿಯವರಿಗೆ ಜಿ ನಾಗೇನಹಳ್ಳಿ ಗ್ರಾಮದ ಸ.ನಂ **34** ರಲ್ಲಿ **2 ¾** ಎಕರೆ ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ. ನನ್ನ ಅಜ್ಜಿ ಜೀವಿತಾವಧಿಯಲ್ಲಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ವಿಭಾಗವನ್ನು ಮಾಡಿಕೊಂಡಿದ್ದರು. ಆ ರೀತಿ ವಿಭಾಗವನ್ನು **1956** ನೇ ಸಾಲಿನಲ್ಲಿ ಮಾಡಿಕೊಂಡಿರುತ್ತಾರೆ. ಆ ಬಗ್ಗೆ ದಾಖಲೆ ಇರುವುದಿಲ್ಲ, ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದ ಆಧಾರದ ಮೇಲೆ ತುಂಬುಗಾನಹಳ್ಳಿ ಗ್ರಾಮದ ಆಸ್ತಿಯ ಖಾತೆಯು ಬದಲಾವಣೆ ಆಗಿರುತ್ತದೆ, ಜಿ ನಾಗೇನಹಳ್ಳಿ ಗ್ರಾಮದ ಆಸ್ತಿಗಳ ಖಾತೆ ಬದಲಾವಣೆ ಆಗಿರುವುದಿಲ್ಲ. ತುಂಬುಗಾನಹಳ್ಳಿ ಗ್ರಾಮದಲ್ಲಿ ನನ್ನ ತಂದೆಯ ಭಾಗಕ್ಕೆ **2** ಎಕರೆ ಜಮೀನು ಬಂದಿರುತ್ತದೆ, ದೊಡ್ಡಯ್ಯರವರಿಗೆ **2** ಎಕರೆ **10** ಗುಂಟೆ ಜಮೀನು ಬಂದಿರುತ್ತದೆ. ಆ ಬಗ್ಗೆ ಪಹಣಿಪತ್ರಿಕೆಗಳು ನಮೂದಾಗಿರುತ್ತದೆ. ವಿಭಾಗದ ಪ್ರಕಾರ ಪ್ರತ್ಯೇಕವಾಗಿ ಪೋಡಾಗಿರುತ್ತದೆ. ತುಂಬುಗಾನಹಳ್ಳಿ ಗ್ರಾಮದ ಸ.ನಂ **8/1** ದೊಡ್ಡಯ್ಯನಿಗೆ, ಸ.ನ **8/2** ನನ್ನ ತಂದೆಗೆ ಬಂದಿರುತ್ತದೆ.

**3.** ಸ.ನಂ **39** ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ನನ್ನ ತಂದೆಗೆ ನಾನು ಮತ್ತು ನನ್ನ ತಮ್ಮ ಪುಟ್ಟಯ್ಯರವರು ಮಕ್ಕಳು. ನಾನು, ನನ್ನ ತಂದೆ ಮತ್ತು ನನ್ನ ತಮ್ಮ ಸೇರಿ ದೊಡ್ಡಯ್ಯರವರಿಗೆ ದಾವಾ ಸ.ನ **39** ರಲ್ಲಿ **1** ಎಕರೆ **20** ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ. ಸದರಿ ಕ್ರಯಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆಂದರೆ ಸರಿ. ನನ್ನ ತಂದೆ ಕ್ರಯಕ್ಕೆ ಪಡೆದ ಜಮೀನಿನ ಚಕ್ಕುಬಂದಿಯ ಆಸ್ತಿಯನ್ನೇ ದೊಡ್ಡಯ್ಯರವರಿಗೆ ಮಾರಾಟ ಮಾಡಿರುತ್ತೇವೆಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.194/2011
DW-3

Witness of the Plaintiff by name Vijay R present, filed affidavit in lieu of chief examination and examined as DW-2.

Sri. HVS prays time.

For cross of DW 2 by **07.04.2026.**

Civil Judge and JMFC.
*Koratagere.*